**ದಿ: 21-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: 2ನೇ ಪ್ರತಿವಾದಿ ಪರ ಶ್ರೀ ಬಿ ಎಸ್ ವಕೀಲರಿಂದ: -**

1. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಕನ್ನಡ ಭಾಷೆಯಲ್ಲಿ ಬರೆದಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನೂ ಬರೆದಿದ್ದಾರೆಂದು ನಾನು ಓದಿ ನೋಡಿದ್ದೇನೆ. ನನ್ನ ಅಕ್ಕ ಖಾಜಾಬಿ ಬೆಂಗಳೂರಿನಲ್ಲಿ ವಾಸ ಮಾಡುತ್ತಾಳೆ. ಅವರು ಅಂದಾಜು 40 ವರ್ಷದಿಂದ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದಾರೆ. ಆಕೆಯ ಮದುವೆಯಾಗಿ ಅಂದಾಜು 60 ವರ್ಷಗಳಾಗಿವೆ. ಮದುವೆಯಾದಾಗಿನಿಂದಲೂ ಅವರು ಗಂಡನ ಮನೆಯಲ್ಲಿ ವಾಸ ಮಾಡಿಕೊಂಡಿದ್ದಾಳೆ. ನಾನು ಅಂದಾಜು 40 ವರ್ಷದಿಂದ ಹುಬ್ಬಳ್ಳಿಯಲ್ಲಿ ವಾಸ ಮಾಡಿಕೊಂಡಿರುತ್ತೇನೆ. ನನ್ನ ಮದುವೆಯಾಗಿ ಅಂದಾಜು 45 ವರ್ಷಗಳಾಗಿವೆ. 1ನೇ ಪ್ರತಿವಾದಿ ನನ್ನ ಅಣ್ಣನಾಗಿರುತ್ತಾನೆ ನಾನು ಕೊನೆಯವಳಾಗಿರುತ್ತೇನೆ. 1ನೇ ಪ್ರತಿವಾದಿ ಜೀವಂತವಾಗಿದ್ದಾರೆ. ನನ್ನ ತಾಯಿ ಹುಸೇನಬೀ ರವರು ನಾನು ಚಿಕ್ಕವಳಿದ್ದಾಗ ತೀರಿಕೊಂಡಿರುತ್ತಾಳೆ. ನನ್ನ ತಂದೆ ನಬೀಸಾಬ ತೀರಿಕೊಂಡು 16-18 ವರ್ಷಗಳಾಗಿವೆ.

2. ನಿಮ್ಮ ತಂದೆಗೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಹೊಲದ ಬಗ್ಗೆ ಗೊತ್ತಿದೆ ಎನ್ನುತ್ತಾರೆ. ಹೊಲಗಳು ಎಷ್ಟು ಇವೆ ಎಂದರೆ ಸಾಕ್ಷಿಯು ಒಂದು ಹೊಲ ಗಳನ್ನು ಪರಾಪುರ ಗ್ರಾಮದಲ್ಲಿ ಒಂದು ಹೊಲ ಇತ್ತು ನನ್ನ ತಂದೆ ಇರುವಾಗಲೇ ಅದು ಮಾರಾಟ ಮಾಡಿರುತ್ತಾರೆ. ಈಗ ಜಾಲಹಳ್ಳಿಯಲ್ಲಿ ಹೊಲಗಳು ಇವೆ. ನಾನು ಚಿಕ್ಕವಳಿದ್ದಾಗ ಸುಮಾರು 4-5 ವರ್ಷದವಳಿದ್ದಾಗ ನನ್ನ ತಂದೆ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ. ಪರಾಪುರ ಗ್ರಾಮದಲ್ಲಿರುವ ಹೊಲಗಳನ್ನು ನಿಮ್ಮ ತಂದೆ ನೀವು ಚಿಕ್ಕವರಿದ್ದಾಗ ಮಾರಾಟ ಮಾಡಿದ್ದಾರೆಂದು ನೀವುಯ ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಮತ್ತು ಬರೆಸಿಲ್ಲ ಎನ್ನುತ್ತಾರೆ. ಪರಾಪುರ ಗ್ರಾಮದಲ್ಲಿ ಎಷ್ಟು ಹೊಲಗಳನ್ನು ಮಾರಾಟ ಮಾಡಿದ್ದಾರೆ ಮತ್ತು ಅದರ ಸರ್ವೆ ನಂಬರ್ ಗೊತ್ತಿದೆಯಾ ಎಂದರೆ ಸಾಕ್ಷಿಯು ನಾನು

ಚಿಕ್ಕವಳಿದ್ದೇನು ಗೊತ್ತಿಲ್ಲ ಎನ್ನುತ್ತಾರೆ. ಪರಾಪುರ ಗ್ರಾಮದ ಸ ನಂ 48/*/ಕ ವಿಸ್ತೀರ್ಣ 07 ಎಕರೆ 08 ಗುಂಟೆ ನಿಮ್ಮ ತಂದೆ ನಬಿಸಾಬ ರವರಿಂದ ನಿಮ್ಮ ಅಣ್ಣ 1ನೇ ಪ್ರತಿವಾದಿ ತನ್ನ ಹೆಸರಿಗೆ ಮುಟೇಶನ್ ನಂಬರ್ 37/2005-06 ದಿನಾಂಕ: 12-07-2006 ರಂತೆ ವರ್ಗಾವಣೆ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಅದು ನಮ್ಮ ದೊಡ್ಡಪ್ಪನ ಹೊಲ ಎಂದು ಹೇಳುತ್ತಾರೆ. ಸದರಿ ಹೊಲ ನಿಮ್ಮ ತಂದೆಯಿಂದ ನಿಮ್ಮ ಅಣ್ಣನಿಗೆ ವರ್ಗಾವಣೆಯಾಗಿದ್ದರೂ ನಿಮ್ಮ ದೊಡ್ಡಪ್ಪನ ಹೊಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಹೊಲ ನನ್ನ ದೊಡ್ಡಪ್ಪನ ಹೊಲ ಆಗಿದ್ದು ಇದನ್ನು ದಾವಾ ಆಸ್ತಿಯಲ್ಲಿ ಸೇರಿಸದೆ ಬಿಟ್ಟು ಹಾಕಿದ್ದೀನಿ ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿಯು ಬರೆಸಿಲ್ಲ ಎನ್ನುತ್ತಾರೆ.

3. ಒಂದು ಮನೆ ನನ್ನ ತಂದೆ ಹೆಸರಿನಲ್ಲಿತ್ತು ಅದನ್ನು ನನ್ನ ಅಣ್ಣ 1ನೇ ಪ್ರತಿವಾದಿ ತನ್ನ ಹೆಸರಿಗೆ ಮಾಡಿಸಿಕೊಂಡಿದ್ದಾನೆ ಆ ಮನೆ ನಂಬರ್ ನನಗೆ ಗೊತ್ತಿಲ್ಲ. ಜಾಲಹಳ್ಳಿ ಗ್ರಾಮನದ ವಾರ್ಡ್ ನಂಬರ್ 6 ರಲ್ಲಿ ಎರಡು ಮನೆ ನಂಬರ್ 126 ಮತ್ತು 127 ನಿಮ್ಮ ತಂದೆಯಿಂದ ನಿಮ್ಮ ಅಣ್ಣ 1ನೇ ಪ್ರತಿವಾದಿ ವರ್ಗಾವಣೆ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು 2 ಮನೆ ಇರುವುದನ್ನು ಒಂದೆ ಮನೆ ಎಂದು ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಜಾಲಹಳ್ಳಿಯಲ್ಲಿ 2 ಮನೆಗಳು ಮತ್ತು ಪರಾಪುರ ಗ್ರಾಮದಲ್ಲಿ ಒಂದು ಹೊಲ ನಿಮ್ಮ ತಂದೆಯ ಹೆಸರಿನಲ್ಲಿರುವುದು ನಿಮಗೆ ಮೊದಲಿನಿಂದಲೂ ಗೊತ್ತಿದೆ ಎಂದರೆ ಸಾಕ್ಷಿಯು ಹೌದು ಗೊತ್ತಿದೆ ಎನ್ನುತ್ತಾರೆ. ಪರಾಪುರ ಗ್ರಾಮದಲ್ಲಿರುವ ಹೊಲ ಮತ್ತು ಜಾಲಹಳ್ಳಿಯಲ್ಲಿರುವ ಎರಡು ಮನೆಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಿಮ್ಮ ಅಣ್ಣ 1ನೇ ಪ್ರತಿವಾದಿ ಮಾರಾಟ ಮಾಡಿರುವ ಆಸ್ತಿಗಳನ್ನು ಮಾತ್ರ ಈ ದಾವೆಯಲ್ಲಿ ಸೇರಿಸಿದ್ದೀರಾ ನಿಮ್ಮ ಅಣ್ಣನ ಹೆಸರಿನಲ್ಲಿರುವ ಉಳಿದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಿಮ್ಮ ಅಣ್ಣ ಮಾರಾಟ ಮಾಡಿರುವ ಆಸ್ತಿಗಳನ್ನು ಮಾತ್ರ ಈ ದಾವೆಯಲ್ಲಿ ಸೇರಿಸಿದ್ದು ನಿಮ್ಮ ಅಣ್ಣ ಮಾರಲಾರದ ಆಸ್ತಿಗಳನ್ನು ಉದ್ದೇಶಪೂರ್ವಕವಾಗಿ ಸೇರಿಸಿಲ್ಲ ಎಂದರೆ ಸರಿ.

4. ನಿಮ್ಮ ತಂದೆಯ ಹೆಸರಿನಲ್ಲಿರುವ ದಾವಾ ಆಸ್ತಿಯ ದಾಖಲೆಗಳನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಪ್ರತಿವಾದಿ 1 ರಿಂದ 3 ರ ಹೆಸರಿನಲ್ಲಿರುವ ದೃಢೀಕೃತ ಪಹಣಿಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಅಣ್ಣನಿಗೆ ದಾವಾ ಆಸ್ತಿಗಳು ಹೇಗೆ ಬಂದಿರುತ್ತವೆ ಎಂದು ನೀವು ಯಾವುದೇ ದಾಖಲಾತಿಯನ್ನು ಹಾಜರು ಮಾಡಿಲ್ಲ ಎಂದರೆ ಸರಿ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂಬರ್ 3ಡಿ ರಲ್ಲಿ ಸ ನಂ 65/2-3, ವಿಸ್ತೀರ್ಣ 00-20 ಗುಂಟೆ ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ನನ್ನ ಅಣ್ಣ 1ನೇ ಪ್ರತಿವಾದಿಯ ಹೆಸರಿನಲ್ಲಿ ಜಮೀನು ಇದೆ ಎನ್ನುತ್ತಾರೆ. ಈ ಜಮೀನನ್ನು ನಿಮ್ಮ ಅಣ್ಣ 1ನೇ ಪ್ರತಿವಾದಿ ಜಾಲಹಳ್ಳಿಯಲ್ಲಿ ತಾಜಮಹಲ್ ಶಾದಿಮಹಲ್ ಕಟ್ಟಲು ಜಮೀನು ದಾನವಾಗಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿದೆ ಎನ್ನುತ್ತಾರೆ. ತಾಜಮಹಲ್ ಶಾದಿಮಹಲ್ ಕಮೀಟಿಯವರಿಗೆ ಜಮೀನು ದಾನವಾಗಿ ಕೊಟ್ಟಿರುವ ವಿಚಾರವನ್ನು ನೀವು ನಿಮ್ಮ ವಾದ ಪತ್ರದಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿ. ನಾವು ಅದನ್ನು ದಾನ ವಾಗಿ ಕೊಟ್ಟಿರುವ ಸಲುವಾಗಿ ಸೇರಿಸಿಲ್ಲ. ತಾಜಮಹಲ್ ಶಾದಿಮಹಲ್ ಕಮೀಟಿಯವರನ್ನು ಈ ದಾವೆಯಲ್ಲಿ ನೀವು ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ನಿಮ್ಮ ಮದುವೆ ಮಾಡಿದ ಮೇಲೆ ನಿಮ್ಮ ತಂದೆ ದಾವಾ ಹೊಲಗಳು 1 ರಿಂದ 3 ನ್ನು ನಿಮ್ಮ ಅಣ್ಣ 1ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ಆಗಿನಿಂದಲೂ ನಿಮ್ಮ ಅಣ್ಣ 1ನೇ ಪ್ರತಿವಾದಿ ದಾವಾ ಆಸ್ತಿಯ ಕಬ್ಜಾದಾರ ಮತ್ತು ಮಾಲೀಕ ಆಗಿದ್ದಾನೆಂದರೆ ಸರಿ. ದಿನಾಂಕ: 13-03-2012 ರಂದು 1ನೇ ಪ್ರತಿವಾದಿ ಮಾಲೀಕನಾಗಿ ತನ್ನ ಮನೆಯ ಕುಟುಂಬದ ಅಡಚಣೆ ಸಲುವಾಗಿ ಸ ನಂ 65/3, ವಿಸ್ತೀರ್ಣ 02 ಎಕರೆ 31 ಗುಂಟೆ 65/2/ಬ ವಿಸ್ತೀರ್ಣ 03 ಎಕರೆ 16 ಗುಂಟೆ ಜಮೀನು 2ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾನೆಂದರೆ ಸರಿ. ಕ್ರಯ ಪತ್ರದ ಆಧಾರದ ಮೇರೆಗೆ 2012 ನೇ ಇಸ್ವಿಯಲ್ಲಿ 2ನೇ ಪ್ರತಿವಾದಿ ಹೆಸರಿಗೆ ಮುಟೇಶನ್ ಆಗಿದೆ ಎಂದರೆ ಸಾಕ್ಷಿಯು ಹೊಲ ಮಾರಾಟ ಮಾಡಿದ ವಿಷಯ ನನಗೆ ನಂತರ

ಗೊತ್ತಾಗಿದೆ ಎನ್ನುತ್ತಾರೆ. 2ನೇ ಪ್ರತಿವಾದಿ ಖರೀದಿ ಮಾಡಿದ ನಂತರ ಆತನೆ ಮಾಲೀಕದಾರ ಮತ್ತು ಕಬ್ಜಾದಾರನಾಗಿದ್ದಾನೆಂದರೆ ಸಾಕ್ಷಿಯು ನಾನು ನನ್ನ ಅಣ್ಣನಿಗೆ ಕೇಳುತ್ತಿದ್ದೇನೆ ಎನ್ನುತ್ತಾರೆ. ನಿಮಗೆ ನಿಮ್ಮ ಅಣ್ಣ 1ನೇ ಪ್ರತಿವಾದಿಯ ಹೆಸರಿಗೆ ಇರುವ ಸ ನಂ ಪರಾಪುರ ಗ್ರಾಮದ ಸ ನಂ 48/*/1, 07 ಎಕರೆ 08 ಗುಂಟೆ ಮತ್ತು ಜಾಲಹಳ್ಳಿಯಲ್ಲಿರುವ ಎರಡು ಮನೆ ನಂಬರ್ ಮತ್ತು ರಲ್ಲಿ 126 ಭಾಗ 127 ಕೇಳಬಹುದು ಆದರೆ ದಾವಾ ಆಸ್ತಿಯಲ್ಲಿ ಭಾಗ ಕೇಳುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆ ನಿಮ್ಮ ಮದುವೆಯ ಸಮಯದಲ್ಲಿ 5 ತೊಲೆ ಬಂಗಾರ ಮತ್ತು 50 ಸಾವಿರ ನಗದು ಹಣ ಕೊಟ್ಟು ಮದುವೆ ಮಾಡಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಿಮ್ಮ ಮದುವೆಯಲ್ಲಿ ನಿಮಗೆ ಬಂಗಾರ ಹಣ ಕೊಟ್ಟಿರುವುದರಿಉಂದ ಆಸ್ತಿಯಲ್ಲಿ ಭಾಗ ಕೇಳುವುದಿಲ್ಲ ಎಂದು ಹೇಳಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಈಗ ದೇವದುರ್ಗ ಗ್ರಾಮದಲ್ಲಿ ನೀರಾವರಿ ಜಮೀನುಗಳು ಆಗಿವೆ ಎಂದರೆ ಸರಿ.ದಾವಾ ಆಸ್ತಿಗಳು ನೀರಾವರಿ ಆಗಿ ಮಾರುಕಟ್ಟೆ ಬೆಲೆ ಜಾಸ್ತಿಯಾಗಿವೆ ಎಂದರೆ ಸರಿ. ನೀವು ಮತ್ತು ನಿಮ್ಮ ಅಕ್ಕ ಹಾಗೂ ಅಣ್ಣ ಶಾಮೀಲಾಗಿ ಈಗ ಜಮೀನು ನೀರಾವರಿಯಾಗಿ ಮಾರುಕಟ್ಟೆ ಬೆಲೆ ಜಾಸ್ತಿಯಾಗಿರುವದರಿಂದ 2ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿ ಕಬಳಿಸಲು ಸುಳ್ಳು ದಾವೆ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ಅಣ್ಣ 1ನೇ ಪ್ರತಿವಾದಿ ಹೆಸರಿನಲ್ಲಿರುವ ಹೊಲ ಮತ್ತು ಮನೆ ಇರುವುದನ್ನು ಮುಚ್ಚಿಟ್ಟು 2ನೇ ಪ್ರತಿವಾದಿಗೆ ಮಾರಾಟ ಮಾಡಿದ ಹೊಲಗಳ ಮೇಲೆ ಮಾತ್ರ ದಾವೆ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ ಮಾರಾಟ ಮಾಡಿದ ಹೊಲಗಳಿಗೆ ಆತನೆ ಮಾಲೀಕದಾರ ಮತ್ತು ಕಬ್ಜಾದಾರನಾಗಿದ್ದಾನೆಂದರೆ ಸರಿ. 2ನೇ ಪ್ರತಿವಾದಿಗೆ ಮಾರಾಟ ಮಾಡಿದ ಹೊಲಗಳಲ್ಲಿ ನಿಮಗೆ ಭಾಗಾಂಶ ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ ಮಾರಾಟ ಮಾಡಿದ ವಿಚಾರಗಳು ನಿಮಗೆ ಹಿಂದೆಯೇ ಗೊತ್ತಾಗಿತ್ತು ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀಸವಾಲು:** 3ನೇ ಪ್ರತಿವಾದಿ ಪರ ವಕೀಲರು ತಕರಾರು ಸಲ್ಲಿಸಿದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ